**ಸಾಕ್ಷಿಯನ್ನು ದಿಃ 15.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಸ್. ಎನ್ ವಕೀಲರಿಂದಃ–**

ನಮ್ಮ ತಂದೆ ತಾಯಿ ಬಾಡಿಗೆ ಮನೆಯಲ್ಲಿ ಇದ್ದಾರೆ ಎಂದು ಹೇಳಿದ್ದು, ಯಾವ ವಿಳಾಸ ಎಂದರೆ ವಿಳಾಸ ಹೇಳಲು ಬರುವುದಿಲ್ಲ ಎನ್ನುತ್ತಾರೆ. ನಾನು ಅವರ ಜೊತೆ ಬಾಡಿಗೆ ಮನೆಯಲ್ಲಿ ವಾಸ ಇಲ್ಲ. ನಮ್ಮ ತಂದೆ ತಾಯಿಗೆ ಸ್ವಂತ ಮನೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಂದೆ ತಾಯಿ ಜೊತೆ ಇರುವುದಿಲ್ಲ, ಆದರೆ ನಾನು ಮತ್ತು ನನ್ನ ಅಣ್ಣ ಅವರ ಖರ್ಚು ವೆಚ್ಚಗಳನ್ನು ನಿಭಾಯಿಸುತ್ತಿದ್ದೇನೆ ಎನ್ನುತ್ತಾರೆ. ನನ್ನ ತಂದೆ ತಾಯಿಯನ್ನು ಸಾಕ್ಷಿ ಹೇಳಿಸಲು ಯಾವುದೆ ತೊಂದರೆ ಇಲ್ಲ. ನಾನು ಸ್ನೇಹಿತನ ಜೊತೆ ವಾಸ ಇದ್ದೇನೆ ಎಂದು ಹೇಳಿದ್ದು, ಆತನ ಹೆಸರು ಹೇಮಂತ್. 3–4 ವರ್ಷಗಳಿಂದ ಸ್ನೇಹಿತನ ಜೊತೆ ವಾಸ ಇದ್ದೇನೆ. ಹಾಗಾಗಿ 3–4 ವರ್ಷಗಳಿಂದ ತಂದೆ ತಾಯಿ ಜೊತೆ ವಾಸ ಇಲ್ಲ. ನಾನು ಬೆಂಗಳೂರಿನ ಬೋಮ್ಮನಹಳ್ಳಿಯಲ್ಲಿ ಸ್ನೇಹಿತನ ಜೊತೆ ವಾಸ ಇದ್ದೇನೆ. ಆತ ಸಾಫ್ಟವೇರ್ ಇಂಜನೀಯರ್ ಆಗಿ ಕೆಲಸ ಮಾಡುತ್ತಿದ್ದಾನೆ. ಐ.ಬಿ.ಎಂ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಆತನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಆತನ ಮೊಬೈಲ್ ನಂಬರ್ ನನಗೆ ನೆನಪಿಲ್ಲ. ಆತನ ಜೊತೆ ವಾಸ ಇಲ್ಲದಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ನೇಹಿತ ಹೇಮಂತ್ ನನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ಹೇಳಿಸಲು ತೊಂದರೆ ಇಲ್ಲವಾ ಎಂದರೆ ಆತನು ಬರಲು ಆಗುವುದಿಲ್ಲ ಎನ್ನುತ್ತಾರೆ. ಆತನನ್ನು ಕರೆಸಿ ಸಾಕ್ಷಿ ಹೇಳಿದತೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಹೆಸರಿನಲ್ಲಿ ಬ್ಯಾಂಕ್ ಖಾತೆಗಳು ಇವೆ ಎಂದರೆ ಸರಿ. ಕೋಟಕ್ ಬ್ಯಾಂಕ್ ನಲ್ಲಿ ನನ್ನ ಹೆಸರಿನ ಖಾತೆ ಇದ್ದು, ಬ್ರ್ಯಾಂಚ್ ಗೊತ್ತಿಲ್ಲ. ಸದರಿ ಬ್ಯಾಂಕ್ ಖಾತೆಯ ವಿವರ ತಿಳಿಸಲು ತೊಂದರೆ ಇಲ್ಲ. ನಾನು ಸ್ವಿಗ್ಗಿಯಲ್ಲಿ ಫುಡ್ ಡಿಲವರಿ ಮಾಡುವ ಕೆಲಸ ಮಾಡುತ್ತೇನೆ ಎನ್ನುತ್ತಾರೆ. ನಾನು ಬಿ.ಈ ಸಂಪೂರ್ಣವಾಗಿ ಮುಗಿಸಿರುತ್ತೇನೆ. ನಾನು ಕಂಪನಿಯೊಂದರಲ್ಲಿ ಕೆಲಸ ಮಾಡಲು ಅರ್ಜಿ ಸಲ್ಲಿಸಿ ಕೆಲಸ ಮಾಡುವ ಪ್ರಯತ್ನಿಸಿರುತ್ತೇನೆ ಆದರೆ ಯಾವುದೂ ಸಿಕ್ಕಿರುವುದಿಲ್ಲ ಎನ್ನುತ್ತಾರೆ. 2018 ಕ್ಕೂ ಮೊದಲು ನಾನು ಬಿಗ್ ಬಾಸ್ಕೇಟ್ ಕಂಪನಿಯೊಂದರಲ್ಲಿ ಕೆಲಸ ಮಾಡಿದ್ದೆ. ಆನಂತರ ನಾನು ಕೆಲಸ ಮಾಡುತ್ತಿಲ್ಲ. ಕಂಪನಿಯಲ್ಲಿ ಕೆಲಸ ಮಾಡಲು ನಾನು ಯಾವುದೆ

ರೀತಿಯಲ್ಲಿ ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ. ಸ್ನೇಹಿತನ ಮನೆಗೆ ಎಷ್ಟು ಬಾಡಿಗೆ ಎಂದರೆ ನನಗೆ ಗೊತ್ತಿಲ್ಲ, ಆದರೆ ನಾನು 2 ಸಾವಿರ ರೂ. ಕೊಡುತ್ತೇನೆ. ಊಟ ತಿಂಡಿಗೆ ಎಲ್ಲರೂ ಸೇರಿ ಖರ್ಚು ಮಾಡುತ್ತೇವೆ. ಸ್ವಿಗ್ಗಿ ಸರ್ವಿಸ್ ನಿಂದ ಪ್ರತಿ ದಿನ 100 ರಿಂದ 200 ರೂ. ಸಂಪಾದಿಸುತ್ತೇನೆ. ದಿನಕ್ಕೆ ನಾನು ಸಾವಿರಾರು ರೂ. ಸಂಪಾದಿಸುವ ಅರ್ಹತೆ ಇದ್ದರೂ ಅರ್ಜಿದಾರರಿಗೆ ಜೀವನಾಂಶ ಕೊಡಬೇಕಾಗುತ್ತದೆ ಎಂದು ದಿನಕ್ಕೆ 100 ರಿಂದ 200 ರೂ. ಸಂಪಾದಿಸುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಗ್ಯವಾಗಿದ್ದೇನೆ. ನಾನು ಆರೋಗ್ಯವಾಗಿದ್ದು, ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೂ ಜೀವನಾಂಶ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ನಿವೃತ್ತ ನೌಕರ ಎಂದರೆ ಸರಿಯಲ್ಲ. ನಿಪಿ. 1 ರ ಮದುವೆ ಆಹ್ವಾನ ಪತ್ರಿಕೆಯನ್ನು ನಾವೆ ಮಾಡಿಸಿರುತ್ತೇವೆ. ಅದರಲ್ಲಿ ನನ್ನ ತಂದೆ ನಿವೃತ್ತ ಟಿ.ಐ.ಡಿ.ಓ ಅಫೀಸರ್ ಎಂದು ನಮೂದು ಇದ್ದು, ಆದರೆ ಅದು ತಪ್ಪಾಗಿ ನಮೂದು ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ನಮ್ಮ ತಂದೆ ಎಲ್ಲಿಯೂ ಕೆಲಸ ಮಾಡಿಲ್ಲ. ಹಾಗೆ ಸಂಬಂಧಪಟ್ಟ ಕಛೇರಿಯಿಂದ ದಾಖಲೆ ತರಿಸಲು ನನಗ್ಯಾವುದೆ ತೊಂದರೆ ಇಲ್ಲ. ನನ್ನ ತಂದೆ ಹುಟ್ಟಿ ಬೆಳೆದಿತ್ತು ನನ್ನ ಪ್ರಕಾರ ಬೆಂಗಳೂರಿನಲ್ಲಿ ಇರಬಹುದು. ಯಾವ ಏರಿಯಾ ಎಂದು ನನಗೆ ಗೊತ್ತಿಲ್ಲ. 4-5 ವರ್ಷಗಳಿಂದ ನಾನು ತಂದೆ ತಾಯಿ ಜೊತೆ ಇಲ್ಲ. ತಂದೆ ತಾಯಿ ಎಲ್ಲಿ ವಾಸ ಇದ್ದರು ಎಂದು ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು 1 ವರ್ಷದ ಹಿಂದೆ ಬೆಂಗಳೂರಿನಲ್ಲಿ ಡಿವೊರ್ಸ್ ಕೋರಿ ಕೇಸ್ ಹಾಕಿದ್ದೇನೆ ಎಂದರೆ ಸರಿ. ಸದರಿ ಕೇಸ್ ನಲ್ಲಿ ನನ್ನ ಅಧಾರ್ ಕಾರ್ಡ ವಿಳಾಸವನ್ನು ಕೊಟ್ಟಿರುತ್ತೇನೆ. ಡೋರ್ ನಂ. 409/784, 1 ನೇ ಮಹಡಿ, 8 ನೇ ಮೇನ್ ರೋಡ್, 5 ನೇ ರೋಡ್, ಹೊಸ ತಿಪ್ಪೆಸಂದ್ರ ಬೆಂಗಳೂರು ವಿಳಾಸದಲ್ಲಿ ನಾನು ವಾಸ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೆಂಗಳೂರಿನ ನ್ಯಾಯಾಲಯದಲ್ಲಿ ಸಲ್ಲಿಸಿರುವ ಎಂ.ಸಿ ನಂ. 5331/2024 ರ ಅರ್ಜಿಯ ದೃಡೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.27** ಎಂದು

ಗುರುತಿಸಲಾಯಿತು. ಸದರಿ ಕೇಸ್ ನಲ್ಲಿ ಈಗ ಹಾಲಿ ವಾಸ ಇರುವ ವಿಳಾಸವನ್ನು ಬರೆಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ವಿಳಾಸ ಗೊತ್ತಿಲ್ಲ ಎನ್ನುತ್ತಾರೆ. ಮೇಲೆ ಹೇಳಿದ ವಿಳಾಸದಲ್ಲೆ ನಾನು ವಾಸ ಇದ್ದರೂ ಸ್ನೇಹಿತನ ಮನೆಯಲ್ಲಿ ವಾಸ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೋಟೊ ತೋರಿಸಲಾಗಿ ಅದರಲ್ಲಿ ತಾನು ಇರುವುದನ್ನು ಗುರುತಿಸಿದ್ದು, ಅದನ್ನು **ನಿಪಿ. 28** ಎಂದು ಗುರುತಿಸಲಾಯಿತು. ಸದರಿ ಪೋಟೊದಲ್ಲಿ ಕಾಣುವ ಐ.ಡಿ ನಂಬರ್ ನನ್ನದೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಪೋಟೊದಲ್ಲಿ ಇರುವ ಕಂಪನಿಯವರನ್ನು ಕರೆಸಿ ಸಾಕ್ಷಿ ಹೇಳಿಸಲು ನನ್ನದೇನು ತಕರಾರು ಇಲ್ಲ. ಮೇಲೆ ಹೇಳಿದ ವಿಳಾಸವನ್ನು 2015 ರಲ್ಲಿ ಖಾಲಿ ಮಾಡಿರುತ್ತೇವೆ. ಈ ನ್ಯಾಯಾಲಯದಿಂದ ಕಳುಹಿಸಿದಂತಹ ಸಮನ್ಸ್ ನೊಟೀಸುಗಳು ಇದೆ ವಿಳಾಸಕ್ಕೆ ಬಂದಿತ್ತು ಎಂದರೆ ಮನೆಯ ಓನರ್ ನಮಗೆ ಪೋನ್ ಮಾಡಿ ಹೇಳಿದಕ್ಕೆ ತೆಗೆದುಕೊಳ್ಳುತ್ತಿದ್ದೆ ಎನ್ನುತ್ತಾರೆ. ಮನೆ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಸದರಿ ಮನೆ ಮಾಲೀಕರನ್ನು ನ್ಯಾಯಾಲಯಕ್ಕೆ ಕರೆಸಲು ತೊಂದರೆ ಇಲ್ಲ. ಸದರಿ ಮನೆ ನಮ್ಮ ತಂದೆ ತಾಯಿ ಮನೆ ಅಗಿದ್ದು, ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋನ್ ಮಾಡಿ ತಿಳಿಸಿದ ಮನೆ ಮಾಲೀಕರು ಮತ್ತು ನಾವು ಅನ್ಯೋನ್ಯವಾಗಿದ್ದೇವೆ ಎಂದರೆ ಸಾಕ್ಷಿ ನಾನು ಅವರಿಗೆ ಭೇಟಿಯೇ ಆಗಿಲ್ಲ ಎನ್ನುತ್ತಾರೆ.

ನನ್ನ ತಂದೆ ಪಿ. ವಂಕಟರಾವ್ ರವರಿಗೆ ಬಾಡಿಗೆ ಕರಾರು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ನಾನೆ ಸಾಕ್ಷಿದಾರನ್ನಾಗಿರುತ್ತೇನೆ ಎಂದರೆ ಅದರಲ್ಲಿ ನನ್ನ ಸಹಿ ಇರುವುದಿಲ್ಲ ಎನ್ನುತ್ತಾರೆ. ಅದರಲ್ಲಿ ಅರುಣ್ ಬಿ.ಎಸ್ ಎನ್ನುವ ಸಹಿ ನನ್ನದೆ ಎಂದರೆ ಸರಿಯಲ್ಲ. ಸದರಿ ಬಾಡಿಗೆದಾರರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ಮಾಡಿಸಲು ನನ್ನದು ಯಾವುದೆ ತಕರಾರು ಇಲ್ಲ. ಮೇಲೆ ಹೇಳಿದ ವಿಳಾಸದ ಮನೆಯ ವಿಧ್ಯುತ್ ಸಂಪರ್ಕ ಬಿಲ್ ನನ್ನ ತಂದೆ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ಮನೆಗೆ ನನ್ನ ತಂದೆಯೆ ಓನರ್ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2024 ರಲ್ಲೂ ವಿಧ್ಯುತ್ ಸಂಪರ್ಕ ಬಿಲ್ ತಂದೆ ಶಿವಾಜಿ ರಾವ್ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟ ಇಲಾಖೆಯಲ್ಲಿ ಮನೆಗೆ ಯಾರ ಹೆಸರಿಗೆ ವಿಧ್ಯುತ್ ಸಂಪರ್ಕ ಇದೆ ಎಂದು ದಾಖಲೆ ಪಡೆದುಕೊಳ್ಳಲು ತೊಂದರೆ ಇಲ್ಲ. 2024 ರಲ್ಲಿ ನಾನು ಕಾರನ್ನು ತೆಗೆದುಕೊಂಡಿಲ್ಲ. ಸದರಿ ಕಾರು ನಂಬರ್ ಕೆಎ 03 ಎನ್ ಟಿ 7196 ಇದ್ದು, ಅದು ನನ್ನದೆ ಎಂದರೆ ಸರಿಯಲ್ಲ.

ಸದರಿ ಕಾರ್ ನ ಸಂಬಂದಪಟ್ಟ ದಾಖಲೆಯನ್ನು ಇಲಾಖೆಯಿಂದ ತರಿಸಲು ಯಾವುದೆ ತೊಂದರೆ ಇಲ್ಲ. ಮನೆಯ ದಾಖಲೆಗಳನ್ನು ಸಂಬಂಧಪಟ್ಟ ಕಾರ್ಪೊರೇಶನ್ ರವರಿಂದ ತರಿಸಲು ನನ್ನದ್ಯಾವುದು ತಕರಾರು ಇಲ್ಲ. ನನ್ನ ತಂದೆ ಗಾವಡಗೆರೆಯಲ್ಲಿ ಹುಟ್ಟಿ ಬೆಳೆದಿದ್ದು, ಅಲ್ಲಿ ಅವರಿಗೆ ಸಂಬಂಧಿಸಿದ ಮನೆ ಇದೆ ಎಂದರೆ ಸರಿಯಲ್ಲ. ಈಗ ತೋರಿಸುವ ಲಕೋಟೆ ಮೇಲೆ ಇರುವ ವಿಳಾಸ ನನ್ನದೆ ಇರುತ್ತದೆ ಎಂದರೆ ಸಾಕ್ಷಿ 2015 ಕ್ಕೂ ಮೊದಲು ಇದ್ದ ವಿಳಾಸ ಎನ್ನುತ್ತಾರೆ. ಸದರಿ ವಿಳಾಸದಲ್ಲಿ ನನ್ನ ಗರ್ಲ್ ಫ್ರೆಂಡ್ ಧನ್ಯಶ್ರೀ ನನ್ನ ಜೊತೆಯಲ್ಲೆ ಇದ್ದರೂ ಎಂದರೆ ಧನ್ಯಶ್ರೀ ಎಂಬುವವರು ಯಾರೆಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಅವರ ಜೊತೆ ಅನ್ಯೋನ್ಯವಾಗಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅವರ ಜೊತೆಯಲ್ಲೆ ಇದ್ದು ನಾನೆ ಹೇಳಿ ನೊಟೀಸ್ ಅನ್ನು ರಿಜೆಕ್ಟ್ ಮಾಡಿಸಿದ್ದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.